ಮಂಜುನಾಥ ಸಿ. ಸಜ್ಜನ್, ಶಿರಸಿ

*ಭಾವ, ರಾಗ, ತಾಳ; ಇದನ್ನೇ ಕಿರಿದಾಗಿ ಭಾರತ ಎನ್ನುವರಂತೆ. ಹೌದೆ?*



ಊಹೂಂ. ಭಾ ಭಾವೈಕ್ಯತೆ; ರ ರಸೋತ್ಪತ್ತಿ; ತ ತಮಹರತೆ; ಇವುಗಳಿಂದ ಭಾರತ.

ದೇವೇಂದ್ರ, ಕಡೂರು

*ಏನೇ ಆಗಲಿ, ಹೇಳೋದು ಸುಲಭ, ನಡೆದುಕೊಳ್ಳೋದು ಕಷ್ಟ ಅಲ್ಲವೆ?*

ಹಾಗೇನಿಲ್ಲ. ಮೌನವ್ರತ ನಡೆದುಕೊಳ್ಳೋದು ಸುಲಭ. ಹೇಳುವುದು ಆಗುವುದೇ ಇಲ್ಲ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

*ಶ್ರೀಕೃಷ್ಣ ಪರಮಾತ್ಮನನ್ನು ಕಳ್ಳ ಕೃಷ್ಣ ಎನ್ನುವರಲ್ಲಾ, ಏಕೆ?*

ಇಂದಿಗೂ ಕೋಟ್ಯಂತರ ಭಕ್ತರ ಮನಸ್ಸನ್ನು ಕದಿಯುವ ಮಹಾನ್ ಕಳ್ಳನಾದುದರಿಂದ.

ಆರ್.ಎಫ್. ಚೋಬಾರಿ, ಬೆಳಗಾವಿ

*ಶಾಂತಿ, ಸುವ್ಯವಸ್ಥೆ ಕಾಪಾಡುವ ಹಿರಿಯ ಪೊಲೀಸ್ ಅಧಿಕಾರಿಗಳೇ ಆತ್ಮಹತ್ಯೆಯ ದಾರಿ ಹಿಡಿದಿದ್ದಾರಲ್ಲಾ...?*



ಸಮುದ್ರ ಮಥನಕ್ಕೂ, ಸಮಾಜ ಮಥನಕ್ಕೂ ಇದೇ ವ್ಯತ್ಯಾಸ; ಅದರಿಂದ ಆ ರಕ್ಷಕರಿಗೆ ಅಮೃತ; ಇದರಿಂದ ಆರಕ್ಷಕರಿಗೆ ವಿಷ!

ಮಲ್ಲೇಶ್ ಎನ್. ಕುಂಬಾರ, ಮುನವಳ್ಳಿ

*ಬಡವನ ಹೃದಯದಲ್ಲಿ ಇರುವಷ್ಟು ಅಂತಃಕರಣ ಶ್ರೀಮಂತನ ಹೃದಯದಲ್ಲಿ ಇರುವುದಿಲ್ಲವಲ್ಲಾ?*

ಅಂತಃಕರಣ ಹೆಚ್ಚಾದರೆ ಶ್ರೀಮಂತ ಬಡವನಾಗುವನೆಂದು ಶ್ರೀಮಂತನಿಗೆ ಗೊತ್ತು.

ಎಸ್.ಎನ್.ಮಹಾಬಲರಾವ್ ನರಸಿಂಹರಾಜಪುರ

*ಸೃಷ್ಟಿಕರ್ತನ ಆರಾಧನೆ ಬಿಟ್ಟು ಸೃಷ್ಟಿಗಳ ಆರಾಧನೆ ಏಕೆ?*

ಹಣ್ಣಿಗೆ ಇರುವ ಆಕರ್ಷಣೆ ಬೇರಿಗೆ ಇರುವುದಿಲ್ಲವಲ್ಲ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ಹೆಣ್ಣಿಗೂ, ಅನುಮಾನಕ್ಕೂ ಎಷ್ಟು ದೂರ?*

ಗಂಡಿಗೂ, ಮತ್ತೊಂದು ಹೆಣ್ಣಿಗೂ ಎಷ್ಟು ದೂರ ಇರುವುದೋ ಅಷ್ಟು.

ಬಿ. ಚಂದ್ರೇಗೌಡ, ಬೆಂಗಳೂರು

*ಸತ್ತವರಿಗೆ ತಿಥಿ ಮಾಡುವುದು ಏಕೆ?*

ಇದ್ದಾಗಲೇ ಮಾಡಬೇಕೆನಿಸಿದ್ದನ್ನು ನಂತರವಾದರೂ ಸಾಧಿಸಿಕೊಳ್ಳುವ ಹಂಬಲ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

*ಸಾಹಿತಿಗಳಿಗೆ ಸನ್ಮಾನಗಳನ್ನು ಯೌವನದಲ್ಲಿ ಮಾಡದೆ ವಯಸ್ಸಾದ ಮೇಲೆ ಮಾಡುವ ಕಾರಣವೇನು?*

ಬೋಳಾಗಿ, ನಡುಗುತ್ತಾ, ಕೊನೆಗಾಣುವ ಮಟ್ಟಕ್ಕೆ ಬಂದಾಗಲೇ ಪೇಟ, ಶಾಲು, ಮತ್ತು ಅಂತಿಮವಾಗಿ ಹಾರ ಉಪಯೋಗಕ್ಕೆ ಬರುವುದು.

ಆರತಿ ಘಟಿಕಾರ್, ದುಬೈ

*ಇನ್ನು ಮುಂದೆ ಗೋಧೂಳಿ ಸಮಯವನ್ನು ಸೀರಿಯಲ್ ಸಮಯ ಎಂದು ಕರೆದರೆ ಹೇಗಿರುತ್ತದೆ?*

ಗೃಹಿಣಿಯರಿಗೆ ಸರಿ; ಹೊರಗೆ ಟ್ರಾಫಿಕ್‌ನಲ್ಲಿ ಸಿಲುಕಿದವರಿಗೆ ಜಾಮ್ ಸೆಷನ್!

ಎಸ್. ಕುಮಾರಸ್ವಾಮಿ, ಚಿಕ್ಕಬಳ್ಳಾಪುರ

*ಹೆಣ್ಣನ್ನು ಕಲ್ಪವೃಕ್ಷಕ್ಕೆ ಹೋಲಿಸಬಹುದೆ ಸಾರ್?*

ಖಂಡಿತ. ಒಲಿದರೆ ಎಳನೀರು; ಒಲಿಯದಿದ್ದರೆ ಚಿಪ್ಪು!

ಕೆ.ಪಿ. ರಾಮಗುಂಡಿ, ಬೈಲಹೊಂಗಲ

*ಸತ್ಯ ಗೊತ್ತಿದ್ದರೂ ಸುಳ್ಳು ಹೇಳುವ ಸಂದರ್ಭ ಬಂದರೆ ಏನು ಮಾಡುವುದು ಸಾರ್?*

ವಕೀಲರನ್ನು ನೇಮಿಸಿಕೊಳ್ಳಿ.

ಪಿ. ಜಯವಂತ ಪೈ, ಕುಂದಾಪುರ

*ಬಹಳಷ್ಟು ದಿವಸಗಳಿಂದ ಪ್ರೀತಿಸಿ ಮದುವೆಯಾದವರು ಕೆಲವೇ ತಿಂಗಳಲ್ಲಿ ಡೈವೋರ್ಸ್‌ಗೆ ಅರ್ಜಿ ಹಾಕುತ್ತಾರಲ್ಲಾ...?*

ಅನಿವಾರ್ಯ. ಅವರ ಜೀವನದಲ್ಲಿ ಪ್ರೀತಿ ಹಾಲು; ಮದುವೆ ಹುಳಿ!

## ಬಹುಮಾನಿತ ಪ್ರಶ್ನೆ

ಮಹಾವೀರ ಕಾಸರ, ಶಿವಮೊಗ್ಗ

*ಸೊಳ್ಳೆಗಳಿಗೆ ಹಲ್ಲುನೋವು, ಬಾಯಿನೋವು ಬರುವುದಿಲ್ಲವೆ?*

ಏಕೆ? ನೀವು ಅಷ್ಟೊಂದು ದಪ್ಪ ಚರ್ಮದವರೆ?

ಹೆಚ್.ಎ. ಅದಿತಿ, ಮೈಸೂರು

*ಊರಿಗೆ ಆಳಲ್ಲ, ಸ್ಮಶಾನಕ್ಕೆ ಹೆಣವಲ್ಲ. ಇದಕ್ಕೆ ಒಂದು ಉದಾಹರಣೆ ಕೊಡಿ?*

ಒಂದೇಕೆ, 224 ಉದಾಹರಣೆಗಳಿವೆ ಎಂದು ಕೆಲವರು ಹೇಳುತ್ತಾರೆ.

ಎಸ್.ಜಿ. ಕರನಂದಿ, ಹುನಗುಂದ

*ಸಣ್ಣವರು ಮಾಡುವ ತಪ್ಪಿಗೂ, ದೊಡ್ಡವರು ಮಾಡುವ ತಪ್ಪಿಗೂ ಇರುವ ವ್ಯತ್ಯಾಸವೇನು?*

ಸಣ್ಣವರ ತಪ್ಪು ಹೇಳಲ್ಪಡುತ್ತದೆ; ದೊಡ್ಡವರ ತಪ್ಪು ಹೂಳಲ್ಪಡುತ್ತದೆ.

ಕೆ.ರಾಮಕೃಷ್ಣಾರೆಡ್ಡಿ, ಬೆಂಗಳೂರು

*ಬೆಂಗಳೂರಿನಲ್ಲಿ ಒಂದು ಲೋಟ ಕಾವೇರಿ ನೀರಿನ ಬೆಲೆ ಎಷ್ಟು?*



ಕಾವೇರಿದಾಗ ಹಲವಾರು ಬಂದ್‌ಗಳಷ್ಟು, ಕಾವಿಳಿದಾಗ ಪೋಲು ಮಾಡುವಷ್ಟು.

ಎಂ.ಜಿ. ಉಮಾ, ಬಳ್ಳಾರಿ

*ಉಪೇಂದ್ರ ಸ್ಟೈಲ್ ಎಂದರೆ ಬುಟ್ಟಿ ಬಿಡುತ್ತಾರೆ. ಗೊಮ್ಮಟೇಶ್ವರ ಸ್ಟೈಲ್ ಬಂದರೆ?*

ನಾನು, ನೀವು ಭೂಮಿಗೆ ಬಂದದ್ದೇ ಆ ಸ್ಟೈಲ್‌ನಲ್ಲಲ್ಲವೇ! ಮಧ್ಯದಲ್ಲಿಯೂ ಹಾಗಿರಬೇಕೆಂದರೆ ಆ ವ್ಯಕ್ತಿತ್ವ ಬೆಳೆಸಿಕೊಳ್ಳಬೇಕು.

ಸುರೇಶ ಅಂಗಡಿ, ಹೂವಿನಹಡಗಲಿ

*ರಾಯಣ್ಣ ಬ್ರಿಗೇಡ್‌ನಿಂದ ಈಶ್ವರಪ್ಪ ಸಿಎಂ ಆದರೆ ಭಾಜಪದ ಅನ್ಯ ವರಿಷ್ಠರ ಗತಿ?*

ಬಿ ಗ್ರೇಡ್.

■ ರಾಮ್